


ಆನೇಕಲ್ ತಾಲೂಕಿನಲ್ಲಿ ಟಿವಿಎಸ್ ಸಂಸ್ಥೆ ಜಾರಿಗೆ ತರುತ್ತಿರುವ ವಿಲೇಜ್ ಬುದ್ಧ ಕಾರ್ಯಕ್ರಮಕ್ಕೆ ಸಚಿವ ಎಚ್.ಕೆ. ಪಾಟೀಲ್ ಚಾಲನೆ ನೀಡಿದರು. ಟಿವಿಎಸ್ ಮೋಟಾರ್ ಕಂಪನಿಯ ಅಧ್ಯಕ್ಷ ವೇಣು ಶ್ರೀನಿವಾಸನ್ ಜತೆಗಿದ್ದರು.

# ಗ್ರಾಮೀಣ ಜನರಿಗೆ ತಂತ್ರಜ್ಞಾನ ಬೇಕು

**ವಿಕ ಸುದ್ದಿಲೋಕ** ಆನೇಕಲ್

"ಹಳ್ಳಿಗಳಲ್ಲಿ ವಾಸಿಸುವ ಜನರ ಸುಧಾರಣೆ ಮಾಡುವ ತಂತ್ರಜ್ಞಾನವನ್ನು ಪ್ರತಿ ಹಳ್ಳಿಗೂ ತಲುಪಿಸುವ ಕೆಲಸವಾಗಬೇಕು," ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಎಚ್.ಕೆ. ಪಾಟೀಲ್ ಹೇಳಿದ್ದಾರೆ.

ಇಲ್ಲಿಗೆ ಸಮೀಪದ ತಟ್ಟನಹಳ್ಳಿ ಗೇಟ್ ಬಳಿಯಿರುವ ಟಿವಿಎಸ್ ಮೋಟಾರ್ಸ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಸೆಂಟರ್‌ನಲ್ಲಿ ಆಯೋಜಿಸಿದ್ದ 'ವಿಲೇಜ್ ಬುದ್ಧ' ಕಾರ್ಯಕ್ರಮ ಉದ್ಘಾಟಿಸಿ ಅವರು, "ಕೈಗಾರಿಕೆಗಳ ಅಭಿವೃದ್ಧಿಯ ಜತೆ ಹಳ್ಳಿಗಳ ಅಭಿವೃದ್ಧಿಯೂ ಆಗಬೇಕು. ಸರಕಾರ ರಾಜ್ಯದ ಹಳ್ಳಿಗಳ ಅಭಿವೃದ್ಧಿಗೆ ಶುದ್ಧ ಕುಡಿಯುವ ನೀರು ಸೇರಿದಂತೆ ಹಲವು ಸವಲತ್ತು ನೀಡುವ 15 ಅಂಶಗಳ ಕಾರ್ಯಕ್ರಮ ಜಾರಿಗೊಳಿಸಿದೆ," ಎಂದು ಅವರು ತಿಳಿಸಿದರು.

"ವಿಲೇಜ್ ಬುದ್ಧ ಅತ್ಯಂತ ಆಕರ್ಷಣೀಯ ಪರಿಕಲ್ಪನೆಯಾಗಿದ್ದು, ವ್ಯಾಪಾರ ಕೇವಲ ವ್ಯವಹಾರಕ್ಕೆ ಮಾತ್ರ ಸೀಮಿತ ಆಗದೆ ಗ್ರಾಮೀಣ ಪ್ರದೇಶಾಭಿವೃದ್ಧಿಯ ಆಶಯ ಹೊಂದಿದೆ. ರಾಜ್ಯ ಸರಕಾರದಿಂದ ವಿಲೇಜ್ ಬುದ್ಧ ಯೋಜನೆಗೆ ಅಗತ್ಯ ನೆರವು ನೀಡಲಾಗುವುದು," ಎಂದು ಭರವಸೆ ನೀಡಿದರು.

ಟಿವಿಎಸ್ ಸಂಸ್ಥೆ ಮುಖ್ಯಸ್ಥ ವೇಣು ಶ್ರೀನಿವಾಸನ್ ಮಾತನಾಡಿ, "ಕೇವಲ ಲಾಭ ಮಾಡುವುದೊಂದೇ ಸಂಸ್ಥೆಯ ಗುರಿಯಲ್ಲ, ನಮ್ಮ ಜತೆ ಸಮಾಜವೂ ಅಭಿವೃದ್ಧಿಗೊಳ್ಳಬೇಕು. ಹಳ್ಳಿಗಳ ಜನರ ಸಹಭಾಗಿತ್ವದೊಂದಿಗೆ ಗ್ರಾಮಗಳ ಅಭಿವೃದ್ಧಿ ನಮ್ಮ ಧ್ಯೇಯ. ಇದಕ್ಕಾಗಿ ಭಾರತೀಯ ಕೈಗಾರಿಕಾ ಮತ್ತು ವಾಣಿಜ್ಯ ಒಕ್ಕೂಟ ಸ್ಥಾಪನೆಯಾಗಿದೆ," ಎಂದು ಅವರು ತಿಳಿಸಿದರು.

## ಏನಿದು ವಿಲೇಜ್ ಬುದ್ಧ ಪರಿಕಲ್ಪನೆ?

**ಆನೇಕಲ್:** ಹಲವಾರು ಕಂಪನಿಗಳು ಸೇರಿ ಸ್ಥಾಪಿಸಿರುವ ಭಾರತೀಯ ಕೈಗಾರಿಕಾ ಮತ್ತು ವಾಣಿಜ್ಯ ಒಕ್ಕೂಟದ ಮೂಲಕ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಜಾರಿಗೆ ತರುವುದೇ 'ವಿಲೇಜ್ ಬುದ್ಧ'ದ ಪರಿಕಲ್ಪನೆ.

ಜಪಾನ್ ಸಹಯೋಗದೊಂದಿಗೆ ಟಿವಿಎಸ್, ಟಾಟಾ, ಮಾರುತಿ, ಮಹಿಂದ್ರಾ ಅಂಡ್ ಮಹಿಂದ್ರಾ ಸೇರಿ ಸುಮಾರು 300ಕ್ಕೂ ಹೆಚ್ಚು ಕಂಪನಿಗಳು ಇದರಲ್ಲಿ ಭಾಗಿಯಾಗಿವೆ. 5 ವರ್ಷದಲ್ಲಿ 10 ಸಾವಿರ ಹಳ್ಳಿಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಆರಂಭಗೊಂಡಿರುವ ಈ ಯೋಜನೆಯಲ್ಲಿ, ಪ್ರತಿ ಕಂಪನಿಯೂ ತಲಾ ಒಂದು ಗ್ರಾಮ ದತ್ತು ಪಡೆಯಲಿದೆ. ಗ್ರಾಮದ ನಿರುದ್ಯೋಗಿಗಳಿಗೆ ಕಾರ್ಖಾನೆಗಳಲ್ಲಿ ಸೂಕ್ತ ಉದ್ಯೋಗ ನೀಡುವುದು, ಪ್ರತಿ ಕುಟುಂಬಕ್ಕೂ ನಿಗದಿತ ಆದಾಯ ಬರುವಂತೆ ವ್ಯವಸ್ಥೆ ಮಾಡುವುದು. ಕುಡಿಯಲು ಶುದ್ಧ ನೀರು ಸೇರಿದಂತೆ ಮೂಲಸೌಕರ್ಯ ಒದಗಿಸುವುದು ಈ ಯೋಜನೆಯ ಉದ್ದೇಶ.

ಆನೇಕಲ್ ತಾಲೂಕಿನ ತಟ್ಟನಹಳ್ಳಿಯನ್ನು ಟಿವಿಎಸ್ ಕಂಪನಿ ದತ್ತು ಪಡೆದಿದ್ದು, ಮೊದಲು ಇಲ್ಲಿಂದಲೇ ಅಭಿವೃದ್ಧಿ ಯೋಜನೆ ಆರಂಭವಾಗಿದೆ. ನಂತರ ಮೈಸೂರು, ಆಂಧ್ರಕ್ಕೆ ವಿಸ್ತರಣೆ ಆಗಲಿದೆ.



# ಗ್ರಾಮೀಣಾಭಿವೃದ್ಧಿಗೆ ವಿಲೇಜ್ ಬುದ್ಧ

**ಬೆಂಗಳೂರು:** 'ವಿಲೇಜ್ ಬುದ್ಧ' ಯೋಜನೆ ಸಮುದಾಯ ಹಾಗೂ ಕೈಗಾರಿಕೆ ನಡುವೆ ಉತ್ತಮ ಸಂಬಂಧ ನಿರ್ಮಿಸುತ್ತದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಎಚ್.ಕೆ.ಪಾಟೀಲ್ ಅಭಿಪ್ರಾಯಪಟ್ಟರು.

ಭಾರತೀಯ ಕೈಗಾರಿಕಾ ಮಹಾ ಒಕ್ಕೂಟ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಯೋಜನೆಗೆ ಚಾಲನೆ ನೀಡಿ ಮಾತನಾಡಿ, ಗ್ರಾಮೀಣ ಪ್ರದೇಶಗಳ ಬೆಳವಣಿಗೆಗೆ ಯೋಜನೆ ಅನುಕೂಲವಾಗಿದ್ದು, ಸರ್ಕಾರ ಪೂರ್ಣ ಸಹಕಾರ ನೀಡಲಿದೆ. ಸಂಸ್ಥೆಗಳ ಸಾಮಾಜಿಕ ಹೊಣೆಗಾರಿಕೆ ಕಾರ್ಯಕ್ರಮದಲ್ಲಿ ಹಳ್ಳಿಗಳಿಗೆ ಹೆಚ್ಚಿನ ಅನುಕೂಲವಾಗುತ್ತಿಲ್ಲ. ಆದರೆ ಪ್ರತ್ಯೇಕವಾಗಿ ಯೋಜನೆ ಮಾಡಿದಾಗ ಹಳ್ಳಿಗಳು ಅಭಿವೃದ್ಧಿಯಾಗುತ್ತವೆ ಎಂದರು.